ಕೇಶವರಾವ್ ಸಾಳುಂಕೆ ತನ್ನನ್ನು ಮರೆತು ವರ್ಷಕ್ಕೆ ನಾಲ್ಕಾರು ಬಾರಿ ಅದು ನಾಲ್ಕೈದು ನಿಮಿಷದ ಭೇಟಿಯಲ್ಲೇ ಶೇಷಗಿರಿ ಪುರೋಹಿತನನ್ನು ನೆನಪಿಟ್ಟುಕೊಳ್ಳುವುದೆಂದರೇನು ಅವನನ್ನು ಎಲ್ಲರೆದುರು ಹೆಸರು ಹಿಡಿದು ಮಾತನಾಡಿಸಿ ಯೋಗಕ್ಷೇಮ ವಿಚಾರಿಸುವುದೇನು ಪ್ರೇಮಚಂದನಿಗೆ ಎಲ್ಲವೂ ಅಯೋಮಯ ಎನಿಸಿ ಕಾರಣ ತಿಳಿಯದೇ ತಲೆಕೆಡಿಸಿಕೊಂಡಿದ್ದ. ಕಳೆದ ಇಪ್ಪತ್ತು ವರ್ಷಗಳಿಂದ ತಾನು ಪ್ರತಿನಿತ್ಯ ನೋಡುತ್ತಿರುವ ಶೇಷಗಿರಿ ಪುರೋಹಿತನ ಮುಖವನ್ನು ಪದೆಪದೆ ಕಣ್ಣೆದುರು ತಂದು ನಿಲ್ಲಿಸಿಕೊಳ್ಳಲು ಪ್ರಯತ್ನಿಸಿದ ಪ್ರೇಮಚಂದನಿಗೆ ಆ ಮುಖದಲ್ಲಿ ಯಾವ ಹೊಸ ಚಹರೆಯೂ ಗೋಚರಿಸಲಿಲ್ಲ. ಕೋಲು ಮುಖ, ನೀಳ ಮೂಗು, ಭ್ರೂಮಧ್ಯದಲ್ಲಿ ಪ್ರತಿಷ್ಠಾಪಿತಗೊಂಡ ಮಂತ್ರಾಕ್ಷತೆ ಸಹಿತ ಉದ್ದನೆಯ ತಿಲಕ, ಹಣೆಯ ಎಡ ಬಲದಲ್ಲಿ ಗಂಧದಿಂದ ನಿರ್ಮಾತೃಗೊಂಡ ಶಂಖ ಮತ್ತು ಚಕ್ರ, ತಲೆಯ ಹಿಂಭಾಗದಲ್ಲಿ ದೃಷ್ಟಿಗೆ ಗೋಚರವಾಗುವ ಶಿಖೆ ಇಪ್ಪತ್ತು ವರ್ಷಗಳಿಂದ ತಾನು ನೋಡುತ್ತಿರುವುದು ಶೇಷಗಿರಿ ಪುರೋಹಿತನ ಇದೊಂದೆ ಚಹರೆ ಅದು ಹೇಗೆ ಕಂಪನಿಯ ಮುಖ್ಯಸ್ಥರನ್ನು ಆಕರ್ಷಿಸಿತು ಎನ್ನುವ ಸಂದಿಗ್ಧತೆಗೆ ಬಿದ್ದು ಪ್ರೇಮಚಂದ ರಾತ್ರಿಯೆಲ್ಲ ಆಲೋಚಿಸಿದ. ಶೇಷಗಿರಿಯ ಈ ಸಿಗ್ನೆಚರ್ ಚಹರೆಯೇ ಕೇಶವರಾವ ಸಾಳುಂಕೆ ಅವನ ಬಗ್ಗೆ ವಿಶೇಷ ಆಸ್ಥೆ ತಾಳಲು ಕಾರಣವಾಗಿತ್ತು ಎನ್ನುವುದು ಪ್ರೇಮಚಂದನ ಮುಗ್ಧ ಮನಸ್ಸಿನ ತಿಳಿವಳಿಕೆಗೆ ನಿಲುಕದ ಸಂಗತಿಯಾಗಿತ್ತು.



ಒಟ್ಟಾರೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಕೇಶವರಾವ ಸಾಳುಂಕೆಯ ಅಳಿಯ ವಾಸಿಸುತ್ತಿರುವುದು ಶೇಷಗಿರಿ ಪುರೋಹಿತನ ಸ್ವಂತ ಮನೆಯಿದ್ದ ಸಾರಸ್ವತ ಕಾಲೋನಿಯ ಐದನೇ ವಾರ್ಡಿನಲ್ಲಿ. ಅಳಿಯ ಮಹಾಶಯ ಅರ್ಧದಲ್ಲೇ ಎಂಜಿನಿಯರ್ ವಿದ್ಯಾಭ್ಯಾಸಕ್ಕೆ ಎಳ್ಳು ನೀರು ಬಿಟ್ಟು ವ್ಯಾಪಾರ ವಹಿವಾಟೆಂದು ನಾಲ್ಕೈದು ವರ್ಷ ಊರೂರು ಅಲೆದಾಡಿ ಆದಾಯಕ್ಕಿಂತ ನಷ್ಟದ ಬಾಬತ್ತನ್ನೆ ತೋರಿಸಿ ಮಾವ ಕೇಶವರಾವ ಸಾಳುಂಕೆಗೆ ತಲೆ ನೋವಾಗಿದ್ದ. ಮಗಳ ಬದುಕಿಗೊಂದು ದಾರಿ ಮಾಡಿಕೊಡಬೇಕೆಂದು ಆಲೋಚಿಸುತ್ತಿದ್ದವರಿಗೆ ಇನ್ನು ಆರು ತಿಂಗಳಲ್ಲಿ ನಡೆಯಲಿರುವ ನಗರಸಭೆ ಎಲೆಕ್ಷನ್ ಕತ್ತಲಲ್ಲಿ ತಡಕಾಡುವವನಿಗೆ ಬೆಳಕಿನ ಕಿರಣದಂತೆ ತೋರಿ ಅವರಲ್ಲಿ ಸಣ್ಣದೊಂದು ಆಸೆ ಚಿಗುರಿಸಿತ್ತು. ಐದನೇ ವಾರ್ಡಿನ ಕ್ಯಾಂಡಿಡೇಟ್ ಆಗಿ ಅಳಿಯನಿಗೆ ಪ್ರಮುಖ ಪಕ್ಷದಿಂದ ಟಿಕೇಟ್ ದೊರಕಿಸಿಕೊಂಡುವಲ್ಲಿ ಯಶಸ್ವಿಯಾದರೂ ಪಕ್ಷ ಮತಗಳನ್ನು ಕ್ರೋಡೀಕರಿಸುವ ಜವಾಬ್ದಾರಿಯನ್ನು ಸಾಳುಂಕೆ ಅವರಿಗೇ ಒಪ್ಪಿಸಿತ್ತು. ಬ್ರಾಹ್ಮಣ ಮತದಾರರೇ ಅಧಿಕವಾಗಿದ್ದ ಆ ವಾರ್ಡಿನಲ್ಲಿ ಹೆಚ್ಚಿನ ಮತದಾರರನ್ನು ಸೆಳೆಯಲು ಕೇಶವರಾವ ಸಾಳುಂಕೆ ಅವರಿಗೆ ಸಹಜವಾಗಿಯೇ ಅದೇ ಸಮುದಾಯಕ್ಕೆ ಸೇರಿದ್ದ ಮತ್ತು ಬಾಹ್ಯ ನೋಟದಲ್ಲಿ ಆ ಎಲ್ಲ ಗುಣಲಕ್ಷಣಗಳನ್ನು ರೂಢಿಸಿಕೊಂಡಿದ್ದ ಶೇಷಗಿರಿ ಪುರೋಹಿತನೇ ಸೂಕ್ತ ವ್ಯಕ್ತಿಯಾಗಿ ಕಾಣಿಸಿದ್ದ. ಕಂಪನಿಯ ಶಾಖಾ ಕಚೇರಿಯ ಭೇಟಿ ಎಂದು ಅಂದಿನ ಕಾರ್ಯಕ್ರಮದ ಪಟ್ಟಿಯಲ್ಲಿತ್ತಾದರೂ ಅವರ ಭೇಟಿಯ ಹಿಂದಿನ ಮಸಲತ್ತು ಶೇಷಗಿರಿಯನ್ನು ಮಾತನಾಡಿಸುವುದೇ ಆಗಿತ್ತು ಎನ್ನುವ ಗುಮಾನಿ ಜನರಲ್ ಮ್ಯಾನೇಜರ್ ರಾಮನಾಥನ ತಲೆಯಲ್ಲಿ ಹೊಳೆಯದೆ ಇರಲಿಲ್ಲ. ಪ್ರೇಮಚಂದನ ಹೆಸರಿಗಾಗಲಿ, ಅವನ ಬಾಹ್ಯ ನೋಟಕ್ಕಾಗಲಿ ಮತ್ತು ಅವನು ಪ್ರತಿನಿಧಿಸುತ್ತಿದ್ದ ಸಮುದಾಯಕ್ಕಾಗಲಿ ಒಂದಕ್ಕೊಂದು ಯಾವ ಸಂಬಂಧಗಳು ಗೋಚರಿಸದೆ ಕಂಪನಿಯ ಮುಖ್ಯಸ್ಥರಿಗೆ ಅವನೊಬ್ಬ ನಿರುಪದ್ರವಿ ಜೀವಿಯಂತೆಯೂ ಅಪರಿಚಿತನಂತೆಯೂ ಕಾಣಿಸಿದ್ದರಲ್ಲಿ ಹೆಚ್ಚು ಅಚ್ಚರಿ ಪಡುವಂಥದ್ದೇನು ಇರಲಿಲ್ಲ.

ಪ್ರೇಮಚಂದ ಗಲಗಲಿಗೆ ಅವನ ಹೆಸರಿನ ಬಗ್ಗೆ ತಕರಾರು ಎದುರಾದದ್ದು ಇಪ್ಪತ್ತೈದು ವರ್ಷಗಳ ಹಿಂದೆ ಅದು ಖುದ್ದು ತನ್ನಿಂದ ತಾಳಿಕಟ್ಟಿಸಿಕೊಂಡ ಹೆಂಡತಿಯಿಂದ ಎನ್ನುವುದು ಇವತ್ತಿಗೂ ಅರಗಿಸಿಕೊಳ್ಳಲಾಗದ ಕಟುಸತ್ಯವಾಗಿ ಅವನನ್ನು ಆಗಾಗ ಕಾಡಿ ಕಂಗೆಡಿಸುತ್ತದೆ. ಅದೆಲ್ಲವನ್ನು